ಅವರ 'ಟೈರ್ಸಾಮಿ', ಟಿ.ಕೆ. ದಯಾನಂದರ 'ರೆಕ್ಕೆ ಹಾವು' ಥರದ ಕೃತಿಗಳಲ್ಲಿ ಆ ಧೋರಣೆಗಳನ್ನು ಗುರುತಿಸಬಹುದು. ಕಟುವಾಗಿ ನಿರಚನೆ ಮಾಡಿಕೊಳ್ಳುವ ಕೃತಿಗಳು ತಮ್ಮ ವಿಕೃತ ಬಿಂಬಗಳಿಂದಲೇ ಮನಸೆಳೆಯುತ್ತಿವೆ ಎನ್ನುವುದು ಸಹ ವಿಷಾದದ ಸಂಗತಿ. ಪಾಪ ಎನ್ನುವುದು ಇನ್ನೊಬ್ಬರ ಪುಣ್ಯದಂತಾದಾಗ ಉಂಟಾಗುವ ಸ್ಥಿತ್ಯಂತರವೇ ಈಗಿನ ಸಾಹಿತ್ಯದಲ್ಲೂ ಕಾಣುತ್ತಿರುವುದು.

ಆಧುನಿಕೋತ್ತರ ಸಾಹಿತ್ಯವು ರಾಜಕೀಯದ ಬರವಣಿಗೆಯೆಂತಲೇ ಹೇಳಬೇಕು. ಸಮಕಾಲೀನ ರಾಜಕೀಯ ಸ್ಥಿತ್ಯಂತರಗಳು ಮಾತ್ರವೇ ರಾಜಕೀಯ ಎಂದು ಭಾವಿಸಕೂಡದು. ಪ್ರತಿರೋಧ ಹುಟ್ಟಿಸಬಲ್ಲ, ನಿಶ್ಚಿತ ಧ್ಯೇಯದ ಸಾಹಿತ್ಯವು ಸದಾ ರಾಜಕೀಯ ಅಭಿವ್ಯಕ್ತಿಯೇ ಆಗಿರುತ್ತದೆ. ಬರಹಗಾರ ತನ್ನ ಪ್ರತಿರೋಧವನ್ನ, ರಾಜಕೀಯ ಐಡಿಯಾಲಾಜಿಯನ್ನು ಹೇಳಲು ಬಳಸುವ ಪ್ರಕಾರಗಳು ಇಂದು ಬದಲಾಗಿವೆ. ಕುವೆಂಪು ಆಗಿನ ರಾಜಕೀಯ ಪರಿಸ್ಥಿತಿಯಲ್ಲಿ ಕನ್ನಡದ ಪರವಾಗಿ ಬರೆದ 'ಅಖಂಡ ಕರ್ನಾಟಕ' ಕವಿತೆ, ನೆಹರೂ ರಾಜಕಾರಣದ ಬಗ್ಗೆ ಹತಾಶರಾಗಿ ಅಡಿಗರು ಬರೆದ 'ನೆಹರೂ ನಿವೃತ್ತರಾಗುವುದಿಲ್ಲ' ಕವಿತೆ, ಪ್ರಜಾಪ್ರಭುತ್ವದ ಅಣಕವಾಡಾಗಿರುವ ನಿಸಾರರ 'ಕುರಿಗಳು ಸಾರ್' ಅವರ ಕವಿತೆ ಮುಂತಾದವು ಕಾವ್ಯದ ಮೂಲಕ ರಾಜಕೀಯ ಪ್ರಜ್ಞೆಯನ್ನು ಮೆರೆದ ಕನ್ನಡದ ಅತ್ಯುತ್ತಮ ಅಭಿವ್ಯಕ್ತಿಗಳು. ಆದರೆ ಈಗ ರಾಜಕೀಯ ವಿಡಂಬನೆ ಎನ್ನುವುದು ಫಿಕ್ಷನ್ ಪ್ರಕಾರದಲ್ಲಿ ಕಾಣಿಸಿಕೊಳ್ಳುತ್ತಿದೆ. ಕನ್ನಡದಲ್ಲಿ ಈ ಹೊತ್ತು ಬರುತ್ತಿರುವ ಸಣ್ಣ ಕತೆ, ಕಾದಂಬರಿಗಳಲ್ಲಿ ರಾಜಕೀಯ ಸತ್ವ ತಿಳಿಯುತ್ತದೆ. ಗುರುಪ್ರಸಾದ ಕಾಗಿನೆಲೆ ಅವರ 'ಹಿಜಾಬ್', ಕುಂ.ವೀ ಅವರ 'ನಿಜಲಿಂಗ', ವಿ.ಎಂ. ಮಂಜುನಾಥರ ತ್ರಿವಳಿ ಕಾದಂಬರಿಗಳೇ ಮುಂತಾದವು ರಾಜಕೀಯವನ್ನು ನೇರವಾಗಿ ಕಥನಕ್ಕೆ ಒಗ್ಗಿಸಿಕೊಳ್ಳುವ ಬಗೆ ಗಮನಿಸಬೇಕು. ಈಗಿನ ಯುಗದ ಅಭಿವ್ಯಕ್ತಿ ಮತ್ತೊಮ್ಮೆ ಹೇಳುವುದಾದರೆ ಕಥನವೇ ಹೊರತು ಕಾವ್ಯವಲ್ಲ. ಹಾಗಾಗಿ ಕಾವ್ಯವು ಶಕ್ತವಾಗಿಯೇ ಬರುತ್ತಿದ್ದರೂ ಅದು ನಿಶ್ಚಿತವಾದ ಪರಿಣಾಮವನ್ನು ಬೀರುವುದಕ್ಕೆ ಸೋಲುತ್ತಿದೆ.

> ಈಗಿನ ಬರಹದಿಂದ ಸಾಮಾಜಿಕ ಬದ್ಧತೆಯ ಅಪೇಕ್ಷೆ ಹೆಚ್ಚಾಗಿದೆ (ಅದು ಕೃತಿಯಲ್ಲಿ ಇರುವುದಕ್ಕಿಂತ ಹೆಚ್ಚಿನದಾಗಿ ಬರಹಗಾರನ ಬದುಕಿನಲ್ಲಿ ಕಾಣುವ ನಿರೀಕ್ಷೆ ಎನ್ನಬಹುದು). ಪ್ರಾಯಶಃ ಬರಹಗಾರನ ನೈತಿಕತೆ ಮತ್ತು ರಾಜಕೀಯ ನಿಲುವುಗಳು ತುಂಬ ನಿರ್ಣಾಯಕವಾದ ಕಾಲವಿದು.

ಆಧುನಿಕೋತ್ತರವಾದ ಮುಂದಿಡುವ ಸಾಮಾಜಿಕ ಅಸ್ಮಿತೆಗಳು ಸಾಹಿತ್ಯದಲ್ಲಿ ಪ್ರಮುಖವಾದ ಸ್ಥಾನ ಪಡೆದಿದೆ. ವಾಸ್ತವವಾಗಿ ಕಲೆಗೂ ಅಸ್ಮಿತೆಯ ಅನನ್ಯತೆಗೂ ಒಂದು ಒಳಸಂಬಂಧವಿರುತ್ತದೆ. ಆದರೆ ಅಸ್ಮಿತೆಗಳು ರಾಜಕೀಯವಾಗಿ, ಸಾಮಾಜಿಕವಾಗಿ ಪ್ರತಿನಿಧಿಸುವ ಭಂಗಿಗಳಾಗಿ ಕುಳಿತಾಗ ಸಾಹಿತ್ಯ ಅದನ್ನು ಹೊರಗಿನಿಂದ ತೆಗೆದುಕೊಳ್ಳುತ್ತದೆಯೋ ಒಳಗಿನಿಂದ ಧ್ಯಾನಿಸುತ್ತದೆಯೋ ಎನ್ನುವುದು ಮುಖ್ಯ. ಏಕೆಂದರೆ ಬಹಿರ್ ನೆಲೆಯಲ್ಲಿ ನಿಂತು ನೋಯುವ ಸಂಗತಿಯನ್ನು ಹೇಳಿಕೊಳ್ಳುವುದರ ಹಿಂದೆ ಖಂಡಿತವಾಗಿ ಒಂದು ರಾಜಕೀಯ ಉದ್ದೇಶ ಇರುತ್ತದೆ. ಇದಲ್ಲದೆ ಸಾಹಿತ್ಯಕ್ಕೆ ಬೇಕಾಗುವ ಜಿಗಿತ ಇರುತ್ತದೆ. ಅದನ್ನು ಮಾಡದೇ ನೆಲಮಟ್ಟದಲ್ಲಿ ನಿಂತಾಗ ಸಾಹಿತ್ಯ ಎನ್ನುವುದು ಪಾರ್ಟಿನೋಸ್ಟ್ ಆದ ಮೈಕ್, ಮೈಮ್‌ಗಳ ಚಲನೆಗಳಂತೆ ಭಾಸವಾಗಬಹುದು. ಆದರೆ ಸಾಹಿತ್ಯದ ಇಂದಿನ ಗ್ರಹಿಕೆಗಳಲ್ಲಿ ಸಾಹಿತ್ಯದ ಹಿಂಚಾಚು ಮುಂಚಾಚುಗಳು ಸಾಮಾಜಿಕವಾಗಿ ರಾಜಕೀಯವಾಗಿ ನಿರೂಪಿತವಾಗುತ್ತಿದ್ದು ಗೆರೆ ಮೇಲೆ ಹಾಯ್ದಂತೆ ಕಾಣುತ್ತದೆ. ಕನ್ನಡದ ಕಳೆದ ದಶಕದ ಕಥೆಗಳಲ್ಲಿ ಆದ ಕಥೆ ಹೇಳುವ ಧಾಟಿಯನ್ನು ಗಮನಿಸಿದರೆ ಅಲ್ಲಿ ಈ ಬಗೆಯ ಪಲ್ಲಟವನ್ನು